# ಕರ್ನಾಟಕ ವಿಧಾನ ಸಭೆ

# KARNATAKA LEGISLATIVE ASSEMBLY

ಮಂಗಳವಾರ, ದಿನಾಂಕ ೧೯ನೇ ಡಿಸೆಂಬರ್ ೧೯೮೯ ಮಾರ್ಗಶಿರ ೨೮, ೧೯೧೦ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೧೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು]

ಶ್ರೀ ವಾಟಾಳ್ ನಾಗರಾಜ್.--ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರಬೇಕೆಂದಿದ್ದೇನೆ. ಜಿಲ್ಲಾ ಪರಿಷತ್ತು...

ಅಧ್ಯಕ್ಷರು.--ಸ್ವಲ್ಪ ಇರಿ.

ಶ್ರೀ ವಾಟಾಳ್ ನಾಗರಾಜ್.--ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ...

ಅಧ್ಯಕ್ಷರು.--ಒಂದು ಪ್ರಸ್ತಾವನೆ ಇದೆ. ಮಾಜಿ ಸದಸ್ಯರೊಬ್ಬರು ನಿಧನರಾಗಿದ್ದಾರೆ. ಅದರ ಬಗ್ಗೆ ಶೋಕ ಪ್ರಸ್ತಾವನೆ ಮಾಡುತ್ತೇನೆ.

## ಸಂತಾಪ ಸೂಚನೆ

ಅಧ್ಯಕ್ಷರು.--ಮಾನ್ಯ ಸದಸ್ಯರೆ, ಮಾಜಿ ವಿಧಾನ ಸಭಾ ಸದಸ್ಯರಾಗಿದ್ದ ಶ್ರೀ ರಾಜಕುಮಾರ್ ನಾಯಕ್ ಅವರು ದಿನಾಂಕ ೧೪ನೇ ಅಕ್ಟೋಬರ್ ೧೯೮೯ರಂದು ನಿಧನರಾದರು. ಮಾನ್ಯರು ಎರಡನೆಯ ಹಾಗೂ ಆರನೆಯ ವಿಧಾನಸಭೆಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ ನಿಧನ ಹೊಂದಿದ ಸದಸ್ಯರ ಸ್ಮರಣಾರ್ಥ ಮಾನ್ಯ ಸದಸ್ಯರು ಎದ್ದು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆ ಒಂದು ನಿಮಿಷ ಎದ್ದು ನಿಂತು ಶೋಕವನ್ನಾಚರಿಸಿತು.)

## ಪ್ರಕಟಣೆ

### ಹರಿಯಾಣ ವಿಧಾನಸಭಾಧ್ಯಕ್ಷರಿಂದ ಕಾರ್ಯಕಲಾಪಗಳ ವೀಕ್ಷಣೆ

ಮಾನ್ಯ ಸದಸ್ಯರೆ, ಹರಿಯಾಣ ವಿಧಾನಸಭೆಯ ಅಧ್ಯಕ್ಷರಾಗಿರತಕ್ಕಂಥ ಮಾನ್ಯ ಎಚ್. ಎಸ್. ಚಾತಾ ಅವರು ಈ ದಿವಸ ನಮ್ಮ ಸದನಕ್ಕೆ ಸದನದ ಕಾರ್ಯಕಲಾಪಗಳನ್ನು ವೀಕ್ಷಿಸುವುದಕ್ಕೆ ಬಂದಿದ್ದಾರೆ. On behalf of you and on my own behalf, I extend a very warm welcome to the Hon'ble Speaker of the Haryana Legislative Assembly Mr. H.S. Chatha.

ಶ್ರೀ ವಾಟಾಳ್ ನಾಗರಾಜ್.--ಮಾನ್ಯ ಅಧ್ಯಕ್ಷರೇ, ಜಿಲ್ಲಾಪರಿಷತ್ ವೇಮಂಕ ಮಾಡಿದ ೩ ಸಾವಿರ ಶಿಕ್ಷಕರನ್ನು...

ಅಧ್ಯಕ್ಷರು.--ಇನ್ನೂ ಎರಡು-ಮೂರು ನಡೆಯಬೇಕಾಗಿರತಕ್ಕ ಕಾರ್ಯಗಳು ಇವೆ. ಅವು ಮುಗಿದ ಮೇಲೆ ನಿಮ್ಮ ವಿಷಯಕ್ಕೆ ಬರುತ್ತೇನೆ.